ಪ್ರಿಯ ವಿದ್ಯಾರ್ಥಿಮಿತ್ರರೆ,

ಒಂದು ವಿಚಿತ್ರ ಸನ್ನಿವೇಶದಲ್ಲಿ ಅಂತಿಮ ವರ್ಷದ ನಿಮ್ಮನ್ನು ಬೀಳ್ಕೊಡುವ ಹಂತ ತಲುಪಿದ್ದೇವೆ! ಯಾರೂ ನಿರೀಕ್ಷಿಸಿರದ ಹಾಗೂ ಇನ್ನೂ ಪೂರ್ತಿ ನಂಬಲೂ ಆಗದ ಈ ಐತಿಹಾಸಿಕವಾದ ವಿಚಿತ್ರ ಪರಿಸ್ಥಿತಿಯನ್ನು ಈ 'ಕೋವಿಡ್-19' ನಮ್ಮೆದುರಿಗೆ ತಂದಿಟ್ಟಿದೆ. ಇದರ ತೀವ್ರ ಪರಿಣಾಮವನ್ನೆದುರಿಸುತ್ತಿರುವುದು ನಮ್ಮ ಶಿಕ್ಷಣಕ್ಷೇತ್ರ. ಆದರೆ ವಾಸ್ತವವನ್ನು ಒಪ್ಪಿಕೊಂಡು ಪರಿಹಾರಾತ್ಮಕ ದೃಷ್ಟಿಕೋನದಿಂದ ಯೋಚಿಸಿ ಮುನ್ನಡೆಯಬೇಕಾಗಿರುವುದು ನಮ್ಮೆಲ್ಲರ ಇಂದಿನ ಆದ್ಯ ಕರ್ತವ್ಯವಾಗಿದೆ.

ಈ ಪರಿಸ್ಥಿತಿ ಬಾರದಿದ್ದಲ್ಲಿ ಇಷ್ಟೊತ್ತಿಗಾಗಲೆ ತಾವೆಲ್ಲರೂ ತಮ್ಮ ಭವಿಷ್ಯದ ಮುಂದಿನ ಹೆಜ್ಜೆಯನ್ನಿಟ್ಟಾಗಿರುತ್ತಿತ್ತು. ಆದರೆ ಕಣ್ಣಿಗೆ ಗೋಚರಿಸದ ಸೂಕ್ಷ್ಮಜೀವಿಯೊಂದು ನಮ್ಮೆಲ್ಲರ ಚಟುವಟಿಕೆಗಳನ್ನು ಸ್ತಬ್ಧಗೊಳಿಸಿ ಎಲ್ಲವನ್ನೂ ಅಸ್ತವ್ಯಸ್ತಗೊಳಿಸಿದೆ! ಕಳೆದ ನಾಲ್ಕೈದು ತಿಂಗಳು ಎಲ್ಲರೂ ಕೈಕಟ್ಟಿ ಕೂರುವಂತಾಗಿದ್ದರಿಂದ ಅಪಾರವಾದ ಆರ್ಥಿಕನಷ್ಟವುಂಟಾಗಿ ಅಭಿವೃದ್ಧಿಯ ದೃಷ್ಟಿಯಿಂದ ನಾವು ದಶಕಗಳ ಕಾಲ ಹಿಂದೆ ಸರಿದುಬಿಟ್ಟಿದ್ದೇವೆ! ಆದರೆ ಇದು ನಮ್ಮ ಆಧುನಿಕ ಬದುಕಿನ ನಾಗಾಲೋಟಕ್ಕೆ ಕೊಂಚ ತಡೆಯನ್ನೊಡ್ಡಿ ಪರಿಸರದ ಪಾಠವನ್ನು ಕಲಿಸಿದ್ದಂತು ಸುಳ್ಳಲ್ಲ. ಹಾಗೆಯೇ ಯಾರೊಬ್ಬರೂ ನಿರೀಕ್ಷಿಸಿರದ, ಕನಸಿನಲ್ಲೂ ಅಪೇಕ್ಷಿಸಿರದ ಸುದೀರ್ಘವಾದ ಬಿಡುವನ್ನೊದಗಿಸಿ ಸ್ವ-ಕಲಿಕೆಗೆ ಪ್ರೇರೇಪಿಸುತ್ತಾ ಆಂತರಿಕ ಉನ್ನತಿಗೆ ಸುವರ್ಣಾವಕಾಶವನ್ನೊದಗಿಸಿತು. ಇದನ್ನು ಸದ್ಬಳಕೆ ಮಾಡಿಕೊಂಡವರೆಷ್ಟು ಜನವೆಂಬುದಷ್ಟೆ ಪ್ರಶ್ನೆ. ಈ ಲಾಕ್‌ಡೌನ್ ಹಾಗೂ ಕ್ವಾರೆಂಟೈನ್‌ಗಳು ನಮಗೆ ಹೊಸತಾದರೂ ಹಿಂದೆಂದೂ ಆಗಿಯೇಇಲ್ಲವೆಂದಲ್ಲ. 1606ರಲ್ಲಿ ಇಂಗ್ಲೇಂಡಿನಲ್ಲಿ ಬಂದೆರಗಿದ ಬ್ಯುಬೋನಿಕ್ ಪ್ಲೇಗ್‌ನಿಂದ ಸಾವಿರಾರು ಜನರು ಅಸುನೀಗಿದ್ದರು. ಆಗ ಲಂಡನ್ನಿನಲ್ಲಿ ನಾಟಕಪ್ರದರ್ಶನಗಳೆಲ್ಲಾ ಸ್ಥಗಿತಗೊಂಡು ಕಡ್ಡಾಯ ಕ್ವಾರೆಂಟೈನ್‌ಗೆ ಒಳಗಾದ ಶೇಕ್ಸ್‌ಪೀಯರ್ ಕಾಲ ಕೂರದೆ ಮ್ಯಾಕ್‌ಬೆತ್, ಕಿಂಗ್‌ಲಿಯರ್ ಮುಂತಾದ ಶ್ರೇಷ್ಟ ಕೃತಿಗಳನ್ನು ರಚಿಸಿದ. ಮತ್ತೊಮ್ಮೆ ಇದೇ ಸಾಂಕ್ರಾಮಿಕ ರೋಗವು 1665ರಲ್ಲಿ ಇಂಗ್ಲೇಂಡಿಗೆ ಧಾಳಯಿಟ್ಟಾಗ ಐಸಾಕ್ ನ್ಯೂಟನ್ ಕೇಂಬ್ರಿಜ್ ವಿಶ್ವವಿದ್ಯಾಲಯಕ್ಕೆ ಸೇರುವ ತವಕದಲ್ಲಿದ್ದ. ಆದರೆ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳನ್ನು ಒಂದು ವರ್ಷದಕಾಲ ರದ್ದುಮಾಡಲಾಯ್ತು. ಅನಿವಾರ್ಯವಾಗಿ ಮನೆಯಲ್ಲೇ ಉಳಯಬೇಕಾದ ನ್ಯೂಟನ್, ಆ ಬಿಡುವಿನ ಅವಧಿಯಲ್ಲೇ ಕ್ಯಾಲ್ಕುಲಸ್‌ನ ಹಲವು ಸೂತ್ರಗಳನ್ನು ರಚಿಸಿದ. ವಕ್ರೀಭವನ, ವರ್ಣವಿಭಜನೆಯೇ ಮುಂತಾದ ಬೆಳಕಿನ ಪ್ರಯೋಗಗಳನ್ನು ಆತ ಕೈಗೊಂಡಿದ್ದು ಕೂಡ ಇದೇ ಸಮಯದಲ್ಲಿ.

ಪ್ರಿಯ ವಿದ್ಯಾರ್ಥಿಗಳೆ, ತಾವುಗಳು ಕೂಡ ಈ ಲಾಕ್‌ಡೌನ್‌ನ ಬಿಡುವಿನ ವೇಳೆಯನ್ನು ಸದುಪಯೋಗಪಡಿಸಿಕೊಂಡದ್ದೀರೆಂದು ಭಾವಿಸುತ್ತೇನೆ. ಸೆಮಿಸ್ಟರಿನ ಪರೀಕ್ಷೆಗಳ ಜೊತೆಗೆ ಮಹಾವಿದ್ಯಾಲಯದಲ್ಲಿ ಸಾಂಪ್ರದಾಯಿಕವಾಗಿ ವರ್ಷದಕೊನೆಯಲ್ಲಿ ಆಯೋಜಿಸಲಾಗುತ್ತಿದ್ದ **'ಸಂಸ್ಥಾಪರ**

**ದಿನಾಚರಣೆ**' ಹಾಗೂ '**ಬೀಳ್ಕೊಡುಗೆ ಸಮಾರಂಭ**'ಗಳನ್ನೂಕೂಡ ನೆರವೇರಿಸಲಾಗಲಿಲ್ಲ. ಆದ್ದರಿಂದ, ನಮ್ಮ ಮಹಾವಿದ್ಯಾಲಯದಲ್ಲಿ ಮೂರು ವರ್ಷಗಳ ಕಲಿಕೆಯನ್ನು ಪೂರೈಸಿ ಮುಂದಿನ ಬದುಕಿನ ಪ್ರಮುಖ ಹೆಜ್ಜೆಯನ್ನಿಡಲು ತಯಾರಾಗುತ್ತಿರುವ ತಮಗೆಲ್ಲರಿಗೂ ಕಾಲೇಜಿನ ಎಲ್ಲರ ಪರವಾಗಿ ಈ ಬರಹದ ಮುಖಾಂತರ ಬೀಳ್ಕೊಡುಗೆಯ ಸಂದೇಶವನ್ನು ತಲುಪಿಸುತ್ತಿದ್ದೇನೆ.

ಕಳೆದ ಮೂರುವರ್ಷಗಳಲ್ಲಿ ಮಹಾವಿದ್ಯಾಲಯದ ಎಲ್ಲಾ ವಿಭಾಗಗಳ ಅಧ್ಯಾಪಕರೂ ತಮ್ಮ ಸಾಮರ್ಥ್ಯದ ಇತಿಮಿತಿಯಲ್ಲಿ ಶೈಕ್ಷಣಿಕ ಕರ್ತವ್ಯವನ್ನು ಚೆನ್ನಾಗಿಯೇ ನಿರ್ವಹಿಸಿದ್ದಾರೆ. ಕಲಿಕೆಯ ಈ ಪಯಣದಲ್ಲಿ ಪ್ರತಿಯೊಬ್ಬರಿಗೂ ಸಹಜವಾಗಿಯೇ ಒಂದಿಷ್ಟು ಹಿತಕರ ಹಾಗೂ ಅಹಿತಕರ ಅನುಭವಗಳೆರಡೂ ಆಗಿಯೇಇರುತ್ತವೆ. ಆದರೆ ಅಹಿತಕರವಾದ ಕಹಿ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಂಡು, ತಾವು ಪಡೆದ ಸಿಹಿ ಅನುಭವಗಳನ್ನು ಸಮಾಜದ ಇತರರೊಂದಿಗೆ ಹಂಚುತ್ತಾ ಮಹಾವಿದ್ಯಾಲಯದ ಘನತೆಯನ್ನು ಹೆಚ್ಚಿಸುವಲ್ಲಿ ಸಹಕರಿಸಬೇಕೆಂದು ಕೋರುತ್ತೇನೆ. ಹಲವುಬಾರಿ ನಿಮ್ಮ ಪ್ರಾಂಶುಪಾಲರ ಆದಿಯಾಗಿ ಇತರ ಅಧ್ಯಾಪಕರುಗಳ ಕಟುಮಾತುಗಳು ತಮ್ಮಲ್ಲಿನ ಉತ್ತಮ ಸಂಸ್ಕಾರದ ಜಾಗೃತಿಯನ್ನು ಮಾಡುವ ಬುದ್ಧಿಮಾತುಗಳಾಗಿದ್ದವೇ ವಿನಾ ಬೇರಾವ ಉದ್ದೇಶ ಹೊಂದಿದ್ದವುಗಳಲ್ಲ ಎಂಬುದು ನೆನಪಿರಲಿ.

ಕೊರೋನೋತ್ತರದ ಆರ್ಥಿಕ ಸಂಕಷ್ಟದ ಕಾಲದಲ್ಲಿ ಉದ್ಯೋಗ ಪಡೆಯುವುದು ಕಷ್ಟಕರವಾಗಲಿದೆ. ಆದ್ದರಿಂದ, ನಿರಂತರವಾದ ಅಧ್ಯಯನ ಮತ್ತು ಪರಿಶ್ರಮದ ಮೂಲಕ ತಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ವಿಶೇಷವಾದ ಕೌಶಲ ಹಾಗೂ ಪರಿಣತಿಯನ್ನು ಪಡೆದುಕೊಂಡು ಉದ್ಯೋಗಾರ್ಹತೆಯನ್ನು ವೃದ್ಧಿಸಿಕೊಳ್ಳುವುದು ಅನಿವಾರ್ಯವಾಗಿದೆ. ಮುಂಬರುವ ದಿನಗಳಲ್ಲಿ ಸ್ವ-ಉದ್ಯೋಗದ ಕುರಿತು ಆಲೋಚಿಸುತ್ತ ಉದ್ಯಮಶೀಲರಾಗುವುದು ಕೂಡ ಅನಿವಾರ್ಯವಾಗಬಹುದು! ಮುಂದಿನ ಉಜ್ವಲ ಭವಿಷ್ಯಕ್ಕಾಗಿ ತಾವು ಯಾವುದೇ ಹೆಜ್ಜೆಯನ್ನು ಆಯ್ಕೆಮಾಡಿಕೊಂಡರೂ, ಮೇಲಿನ ಎಲ್ಲಾ ಮಾತುಗಳನ್ನು ಗಮನದಲ್ಲಿರಿಸಿಕೊಳ್ಳಿರೆಂದು ಹೇಳಬಯಸುತ್ತೇನೆ. ಹಾಗೂ **ಬರುವ ದಿನಗಳಲ್ಲಿ ತಾವು ಉನ್ನತಶಿಕ್ಷಣ, ಉದ್ಯೋಗ ಅಥವಾ ಇತರೆ ಯಾವುದೇ ಕಾರ್ಯಗಳಲ್ಲಿ ತೊಡಗಿರುವ ಮಾಹಿತಿಯನ್ನು ಕಾಲೇಜಿನ ತಮ್ಮ ವಿಭಾಗದ ಮುಖ್ಯಸ್ಥರುಗಳ ಬಳಿ ಮರೆಯದೆ ಹಂಚಿಕೊಳ್ಳಿರಿ**. ಜೊತೆಗೆ ಕಾಲೇಜಿನ ಹಳೆಯ(ಹಿರಿಯ) ವಿದ್ಯಾರ್ಥಿಸಂಘದ ಸದಸ್ಯರಾಗಿ ನಮ್ಮೊಂದಿಗೆ ನಿರಂತರವಾದ ಸಂಪರ್ಕದಲ್ಲಿರಬೇಕೆಂದೂ ಕೋರುತ್ತಿದ್ದೇನೆ.

ಬದುಕಿನಲ್ಲಿ ಹಣ, ಉದ್ಯೋಗ, ಯಶಸ್ಸು ಇವೆಲ್ಲಕ್ಕೂ ಮಿಗಿಲಾದದ್ದು ಮಾನವೀಯ ಮೌಲ್ಯಗಳೆಂಬ ಎಚ್ಚರ ನಿಮ್ಮಲ್ಲಿ ಸದಾ ಇರಲೆಂದು ಕಡೇಯದಾಗಿ ಹೇಳುತ್ತಾ, ನಿಮಗೆಲ್ಲರಿಗೂ ಶುಭಹಾರೈಕೆಗಳನ್ನು ಕೋರುತ್ತಾ ಈ ಕಿರು ಸಂದೇಶಕ್ಕೆ ಪೂರ್ಣವಿರಾಮ ಹಾಕುತ್ತಿದ್ದೇನೆ.

ಪ್ರಾಚಾರ್ಯರು,
ಎಂ. ಇ. ಎಸ್., ಎಂ. ಎಂ. ಕಲಾ ಮತ್ತು ವಿಜ್ಞಾನ
ಮಹಾವಿದ್ಯಾಲಯ, ಶಿರಸಿ(ಉ. ಕ.)

(ಡಾ. ಟಿ. ಕೆ. ಶಿಣೈ)